# ಭಾರತ ಹತ್ತಿಕ್ಕಬೇಕಿರುವ ಸವಾಲುಗಳು

**ರಾಜ್ಯಸಭಾ ವಿರೋಧ ಪಕ್ಷದ ನಾಯಕ ಶ್ರೀ ಅರುಣ್ ಜೇಟ್ಲೆಯವರು 31.1.2013ರಂದು ಮುಂಬೈ ವಿಶ್ವವಿದ್ಯಾಲಯದಲ್ಲಿ ಕೆ.ಎಂ.ಕುಂದನಾನಿ ಸ್ಮಾರಕ ಉಪನ್ಯಾಸ ನೀಡಿದ ಭಾಷಣದ ಆಯ್ದ ಭಾಗ ಇಲ್ಲಿದೆ.**

ಸಿನಿಕತನ ಹಾಗೂ ವಿಶ್ವಾಸದ ದ್ವಂದ್ವವಿರುವ ಯುಗದಲ್ಲಿ ನಾವು ಬಾಳುತ್ತಿದ್ದೇವೆ. ತಮ್ಮ ಸುತ್ತ ಪರಿಸರದಲ್ಲಿ ಕಾಣುವ ಮನಗುಂದುವ ವಾತಾವರಣವನ್ನು ನೋಡಿದಾಗ ಸಾರ್ವಜನಿಕ ಅಭಿಪ್ರಾಯದಲ್ಲಿ ಸಿನಿಕತನ ಕಾಣಿಸಿಕೊಳ್ಳುತ್ತದೆ. ಆದರೆ, ಭಾರತ ಸಹಿಷ್ಣುತೆಯ ಪರಮಶಕ್ತಿಯನ್ನು ಪ್ರದರ್ಶಿಸಿದೆ. ಆದ್ದರಿಂದ, ಸಿನಿಕತನವನ್ನು ಮೀರಿ, ಸಹಿಷ್ಣುತೆಯ ಮನೋಭಾವದಿಂದ ವಿಶ್ವಾಸ ಹುಟ್ಟುತ್ತದೆ.

ನಮ್ಮ ಜನಸಂಖ್ಯೆಯ ಶೇಕಡ 60ರಷ್ಟು ಜನ ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಕೃಷಿ ವಲಯ ಕೇವಲ ಶೇಕಡ 16ರಷ್ಟು ಕಾಣಿಕೆಯನ್ನು ಜಿಡಿಪಿಗೆ ನೀಡುತ್ತದೆ. ನಮ್ಮ ಜಿಡಿಪಿಗೆ ಸೇವಾವಲಯದ ಕಾಣಿಕೆ ಶೇಕಡ 60 ತಲುಪಿದೆ. ಸರ್ಕಾರದ ನೀತಿ ಅಥವಾ ಅದು ನೀಡುವ ಮೂಲಸೌಲಭ್ಯವನ್ನು ಸಂಪೂರ್ಣವಾಗಿ ಅವಲಂಬಿಸದೆ ಇರುವ ಕಾರಣ, ಸೇವಾ ಕ್ಷೇತ್ರ ಉತ್ತಮ ಬೆಳವಣಿಗೆ ಸಾಧಿಸಿದೆ. ಕೃಷಿ ವಲಯದಿಂದ ಉತ್ಪಾದನಾ ವಲಯಕ್ಕೆ ಅಥವಾ ಸೇವಾ ಕ್ಷೇತ್ರಕ್ಕೆ ಜನಸಂಪನ್ಮೂಲ ವರ್ಗಾವಣೆಯಾದ ಕಾರಣ ಕೃಷಿ ವಲಯದಲ್ಲಿ ಜನಸಂಪನ್ಮೂಲದ ಕೊರತೆ ಎದುರಾಗಿರುವುದು ಈಗಿರುವ ಪ್ರಮುಖ ಸವಾಲಾಗಿದ್ದು, ಇದನ್ನು ಹತ್ತಿಕ್ಕುವ ಆವಶ್ಯಕತೆಯಿದೆ.

**ರಾಜಕಾರಣದ ಗುಣಮಟ್ಟ**

ಸಂಸದೀಯ ಪ್ರಜಾಪ್ರಭುತ್ವದಲ್ಲಿ, ರಾಜಕಾರಣವು ದೇಶದ ಜನಜೀವನದ ಮೇಲೆ ಪ್ರಭಾವ ಬೀರುತ್ತದೆ. ನೀತಿಯಿಂದಲೇ ದೇಶದ ದಿಕ್ಕು ನಿರ್ಧಾರವಾಗುತ್ತದೆ. ರಾಜಕಾರಣದ ಶಕ್ತಿ ಉತ್ಕೃಷ್ಟವಾದುದು. ಆದ್ದರಿಂದಲೇ, ರಾಜಕಾರಣ ಮಾಡುವ ವ್ಯಕ್ತಿಯ ಪ್ರಬುದ್ಧತೆಯು ಉತ್ತಮ ಆಡಳಿತದ ಆಶಯಗಳಿಗೆ ಅನುರೂಪವಾಗಿರಬೇಕಾಗುತ್ತದೆ. ಕೆಟ್ಟ ಆಳ್ವಿಕೆಯಿಂದಲೇ ಭಾರತದ ಜಿಡಿಪಿ ಶೇಕಡ 9ರಷ್ಟು ವೃದ್ಧಿಸುವ ಸಾಮರ್ಥ್ಯ ಹೊಂದಿದ್ದರೆ, ದೇಶದಲ್ಲಿ ಉತ್ತಮ ಆಳ್ವಿಕೆಯಿದ್ದ ಪಕ್ಷದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಸಾಧ್ಯವಿತ್ತು.

ಕಳೆದ ಎರಡು ದಶಕಗಳಲ್ಲಿ, ಭಾರತವು ರಚನೆಬದ್ಧ ರಾಜಕೀಯ ಪಕ್ಷಗಳ ಸಂಖ್ಯೆಯನ್ನು ಕಳೆದುಕೊಳ್ಳುತ್ತಿದೆ. ಬಹುಪಾಲು ಪಕ್ಷಗಳು ಒಂದು ಕುಟುಂಬದ ಸುತ್ತಿರುವ ಜನಸಮೂಹವನ್ನು ಹೋಲುತ್ತವೆ. ಕೆಲವು ಪಕ್ಷಗಳು ಜಾತಿಯನ್ನು ಓಲೈಸುತ್ತವೆ, ಆ ಒಂದು ಸಮುದಾಯದ ಬೆಂಬಲದೊಂದಿಗೆ ಅಸ್ತಿತ್ವ ಪಡೆದಿರುತ್ತವೆ. ರಚನೆಯಿಲ್ಲದ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಕಂಡುಕಾಣದಂತಿರುತ್ತದೆ. ಕೆಲವು ವಂಶಪಾರಂಪರ್ಯವಾಗಿ ಅಧಿಕಾರ ವರ್ಗಾಯಿಸಿಕೊಳ್ಳುತ್ತವೆ. ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ವಿಕಸಿತಗೊಳ್ಳುತ್ತಾ, ಕ್ಷಮತೆ ಆಧರಿಸಿ ಆಳ್ವಿಕೆ ನೀಡುವ ಪ್ರಜಾಪ್ರಭುತ್ವದಿಂದ, ವಂಶಪಾರಂಪರಗತ ಪ್ರಜಾಪ್ರಭುತ್ವದತ್ತಾ ಸಾಗುತ್ತಿರುವ ಒಂದು ಆಂಶವನ್ನು ಗಮಿನಿಸುತ್ತಿದ್ದೇವೆ. ಇದರಿಂದಲೇ ರಾಜಕಾರಣದ ಗುಣಮಟ್ಟ ತೀಕ್ಷ್ಣ ಇಳಿಮುಖ ಕಂಡಿದೆ. ವ್ಯಕ್ತಿಗತ ರಾಜಕಾರಣಕ್ಕೆ ಮಣೆ ಹಾಕಲಾಗುತ್ತಿದೆ. ಯೋಗ್ಯ ನೀತಿಯ ಸ್ಥಾನವನ್ನು ಜಾತಿ ಪ್ರಾಬಲ್ಯತೆ ಆವರಿಸುತ್ತಿದೆ. ಆದರೂ ಸಹ ವಿಶ್ವಾಸ ಮರೆಯಾಗಿಲ್ಲ. ಭಾರತದ ಮಧ್ಯಮ

ವರ್ಗ ಬೆಳೆಯುತ್ತಿದೆ. ಆಕಾಂಕ್ಷೆಗಳನ್ನುಳ್ಳ ವರ್ಗವೂ ವಿಸ್ತಾರಗೊಳ್ಳುತ್ತಿದೆ. ಜನಸಾಮಾನ್ಯರು ಸಹನೆ ಕಳೆದುಕೊಳ್ಳುತ್ತಿದ್ದಾರೆ. ಸಾರ್ವಜನಿಕ ಅಭಿಮತ ಒಂದರಿಂದಲೇ ರಾಜಕಾರಣದ ದಿಕ್ಕು ಬದಲಾಯಿಸಲು ಸಾಧ್ಯ. ವ್ಯಕ್ತಿಯ ಕುಲನಾಮ ಮತ್ತು ಜಾತಿಗಳ ಬದಲು ಸಾಬೀತಾದ ಸಾಮರ್ಥ್ಯ ಹಾಗೂ ಪ್ರಾಮಾಣಿಕತೆಗೆ ಜನಮನ್ನಣೆ ದೊರೆತರೆ, ಭಾರತೀಯ ಪ್ರಜಾಪ್ರಭುತ್ವದ ನಿಜವಾದ ಶಕ್ತಿ ಹೊರಹೊಮ್ಮುತ್ತದೆ. ಇದರ ಪರಿಣಾಮ ಗುಣಮಟ್ಟದ ಆಳ್ವಿಕೆ ಮೇಲಾಗುತ್ತದೆ.

**ನೀತಿ ವೈಕಲ್ಯ ಮತ್ತು ಬಡತನ ನಿರ್ಮೂಲನೆ**

ಉತ್ತಮ ಆಳ್ವಿಕೆಗೆ ಬಲವಾದ ನಾಯಕತ್ವದ ಅಗತ್ಯವಿದೆ. ನೀತಿ ನಿರೂಪಿಸಲು ನಿರ್ಣಾಯಕ ಮನೋಭಾವ ಅಗತ್ಯ. ನಾಯಕನಾದವನಿಗೆ ಅಗತ್ಯವಾಗಿ ವಿಶ್ವಾಸಾರ್ಹತೆ ಇರಬೇಕಾಗುತ್ತದೆ. ಭಾರತಕ್ಕೆ ನಿಖರವಾದ ಆರ್ಥಿಕ ಮಾದರಿಯಿರಬೇಕೆಂಬ ವಿಚಾರಕ್ಕೆ ವ್ಯಾಪಕ ಸಹಮತಿ ದೊರೆತಿದೆ. ಮುಂದಿನ ಒಂದು ದಶಕ ಮತ್ತು ಮುಂದೆ, ಶೇಕಡ 9ರ ವೃದ್ಧಿದರ ಹೊಂದುವ ಅಗತ್ಯವಿದೆ. ನಿರಂತರವಾಗಿ ಶೇಕಡ 9ರ ವೃದ್ಧಿದರ ಸಾಧಿಸಿದರೆ ಬಂಡವಾಳ ಹರಿವು ಸುಧಾರಿಸುತ್ತದೆ, ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ಸರ್ಕಾರಕ್ಕೆ ಉತ್ತಮ ಆದಾಯ ಗಳಿಕೆಯಾಗುತ್ತದೆ. ಸರ್ಕಾರ ಹೆಚ್ಚಿನ ಆದಾಯ ಗಳಿಸಿದರೆ, ಅದರಿಂದ ಮೂಲಭೂತ ಸೌಕರ್ಯ ಹಾಗೂ ಸಾಮಾಜಿಕ ಕಾರ್ಯಕ್ರಮಗಳಿಗೆ ಹಣ ವಿನಿಯೋಗಿಸಲು ಸಾಧ್ಯವಾಗುತ್ತದೆ. ಬಡತನ ನಿರ್ಮೂಲನೆ ಯೋಜನೆಗಳ ಅನುಷ್ಠಾನ ತೀವ್ರಗೊಳ್ಳುತ್ತದೆ. ದುರಾದೃಷ್ಟವಶಾತ್, ಕಳೆದ ಕೆಲವು ವರ್ಷಗಳಲ್ಲಿ ನೀತಿ ವೈಕಲ್ಯತೆ ಹಾಗೂ ರಾಜಕೀಯ ನಾಯಕರ ವಿಶ್ವಾಸಾರ್ಹತೆಯ ಕೊರತೆ ಎದ್ದು ಕಾಣುತ್ತಿದೆ. ಈ ವಿದ್ಯಮಾನ ಬದಲಾಗಬೇಕಿದೆ. ವರಮಾನ ವೃದ್ಧಿ ಕಾರ್ಯಕ್ರಮಗಳು ಸೇರಿದಂತೆ, ನಮ್ಮ ಬಡತನ ನಿರ್ಮೂಲನೆ ಯೋಜನೆಗಳು ತಮ್ಮ ಸಾಮಾಜಿಕ ಉದ್ದೇಶಗಳು ಹಾಗೂ ಸ್ವತ್ತು ಸೃಷ್ಟಿಸುವ ಗುರಿಯನ್ನು ಮೈಗೂಡಿಸಿಕೊಳ್ಳಬೇಕಾಗಿದೆ. ಮಲ ಹೊರುವ ಸಾಮಾಜಿಕ ಪಿಡುಗು ನಿರ್ಮೂಲನೆಯೊಂದಿಗೆ, ವಿಶೇಷವಾಗಿ ಬುಡಕಟ್ಟು ಜನಾಂಗ ಸೇರಿದಂತೆ ದುರ್ಬಲ ವರ್ಗದ ಸಬಲೀಕರಣ, ಆರೋಗ್ಯ ರಕ್ಷಣೆ ವ್ಯವಸ್ಥೆಯ ಸುಧಾರಣೆ, ಶಿಕ್ಷಣ ಹಾಗೂ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಯು ವರ್ತಮಾನದ ಪ್ರಮುಖ ಸವಾಲುಗಳಾಗಿವೆ.

**ಶೇಕಡ 9ರ ವೃದ್ಧಿ ದರ ಸಾಧಿಸುವುದು ಹೇಗೆ?**

ಭಾರತವು ಶೇಕಡ 9ರ ವೃದ್ಧಿದರ ಸಾಧಿಸಬೇಕಾದರೆ ನಿರ್ಣಾಯಕ ನೀತಿ ನಿರೂಪಣೆಯ ಅಗತ್ಯವಿದೆ. ಮೂಲಸೌಕರ್ಯ ಅಭಿವೃದ್ಧಿ ವೇಗ ತೀವ್ರಗೊಳ್ಳುವ ಮತ್ತು ಸುಧಾರಿಸುವ ಅಗತ್ಯವಿದೆ. ಸೋಜಿಗದ ಸಂಗತಿಯೆಂದರೆ, ಯಶೋಗಾಥೆ ಎನಿಸಿದ ದೂರಸಂಪರ್ಕ ಕ್ಷೇತ್ರ ಮತ್ತು ರಾಷ್ಟ್ರೀಯ ಹೆದ್ದಾರಿಗಳು ಭ್ರಷ್ಟಾಚಾರದ ಮಡಿಲಲ್ಲಿ ಸಿಲುಕಿವೆ. ಪರಿಸರ ರಕ್ಷಣೆ ಎಂಬ ನೆಪ ಒಡ್ಡಿ, ಹೊಸ ಲೈಸೆನ್ಸ್ ಪದ್ಧತಿಗೆ ಜೋತುಬಿದ್ದು ಅಸಂಖ್ಯ ದೊಡ್ಡ ಗಾತ್ರದ ಬಂಡವಾಳ ಹೂಡಿಕೆ ಅವಕಾಶವನ್ನು ತಡೆಹಿಡಿಯುವುದು ಆರ್ಥಿಕ ವ್ಯವಸ್ಥೆಯ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಅರ್ಥವ್ಯವಸ್ಥೆ ಮತ್ತು ಜೈವಿಕ ಸ್ವತ್ತು ಇವೆರಡೂ ಕೂಡ ಸಹಬಾಳ್ವೆ ನಡೆಸಬೇಕಿದೆ. ನಮ್ಮ ಉತ್ಪಾದನಾ ಕ್ಷೇತ್ರದ ಸುಧಾರಣೆಗಳು ತ್ವರಿತಗತಿಯಲ್ಲಿ ಜಾರಿಗೆ ಬರಬೇಕಿದೆ. ಅಗ್ಗದ ಉತ್ಪನ್ನಗಳನ್ನು ಖರೀದಿಸುವ ಗ್ರಾಹಕರನ್ನು ಹೊಂದಿರುವ ಯುಗ ಇದಾಗಿದೆ. ಯಶಸ್ವಿಯಾಗಲು, ಅಲ್ಪ ವೆಚ್ಚದ ಉತ್ಪಾದನಾ ವ್ಯವಸ್ಥೆ ಹೊಂದುವುದು ಆವಶ್ಯಕ. ಬಡ್ಡಿ ದರಗಳ ಸರಳೀಕರಣ, ಮೂಲಭೂತ ಸೌಕರ್ಯಗಳ ಸುಧಾರಣೆ, ವಿದ್ಯುತ್ ಕ್ಷೇತ್ರದ ಸುಧಾರಣೆಗಳ ಪ್ರಭಾವಿ ಅನುಷ್ಠಾನ ಹಾಗೂ ಅಂತಾರಾಷ್ಟ್ರೀಯ ಬೆಲೆಗಳಿಗೆ ಸಮನಾದ ಉಪಯುಕ್ತ ಸಾಮಗ್ರಿಗಳನ್ನು ಅಭಿವೃದ್ಧಿ ಪಡಿಸುವುದೇ ಇಂದಿನ ಅಗತ್ಯಗಳಾಗಿವೆ.

ಹೆದ್ದಾರಿ, ಬಂದರು, ವಿಮಾನ ನಿಲ್ದಾಣಗಳು, ಗ್ರಾಮೀಣ ರಸ್ತೆಗಳಿಗೆ ಸಿಗಬೇಕಾದ ಮಾನ್ಯತೆ ಹೆಚ್ಚಬೇಕಾಗಿದೆ. ಪ್ರವಾಸೋದ್ಯಮದ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳುವಲ್ಲಿ ಭಾರತ ಸೋತಿದೆ. ಪ್ರವಾಸೋದ್ಯಮ ಸಂಬಂಧಿತ ಕೈಗಾರಿಕೆಗಳ ಮೇಲೆ ಅತ್ಯಲ್ಪ ತೆರಿಗೆ, ಸುಧಾರಿತ ವಿಮಾನ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಹಾಗೂ ಅಗ್ಗದ ಹೋಟೇಲುಗಳನ್ನು ಆರಂಭಿಸುವ ಮೂಲಕ ಪ್ರವಾಸೋದ್ಯಮದ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಸಾಧ್ಯವಿದೆ. ದೇಶದ ಒಳಗೆ ಸರಕು ಸರಂಜಾಮುಗಳ ಸಾಗಣೆ ವ್ಯವಸ್ಥೆ ಸುಧಾರಿಸುವ ಅಗತ್ಯವಿದೆ. ಅತ್ಯಧಿಕ ತೆರಿಗೆ ವಿಧಿಸುವುದು ಅಲ್ಪಗಾಲದ ನೀತಿಯಾಗಿದ್ದು, ಇದರಿಂದ ದೀರ್ಘಗಾಲದ ಫಲಿತಾಂಶ ಪಡೆಯಲು ಸಾಧ್ಯವಾಗದು. ತೆರಿಗೆ ದರಗಳು ನಿಮ್ನವಾಗಿದ್ದು ಅಂತಾರಾಷ್ಟ್ರೀಯ ಮಟ್ಟಕ್ಕೆ ಸರಿದೂಗುವಂತಿರಬೇಕು. ನೀವು ಉತ್ಪನ್ನಗಳನ್ನು ರಫ್ತುಗೊಳಿಸಿ, ನೀವು ರಫ್ತು ತೆರಿಗೆಯನ್ನೂ ಸಂಗ್ರಹಿಸಿ. ನಾವು ಹಲವಾರು ಯಶೋಗಾಥೆಗಳನ್ನು ಕಂಡಿದ್ದೇವೆ. ಶಿಕ್ಷಣ ವಲಯ, ಮಾಹಿತಿ ತಂತ್ರಜ್ಞಾನ, ದೂರಸಂಪರ್ಕ, ಔಷಧಿಗಳ ಕ್ಷೇತ್ರ, ವಾಹನ ನಿರ್ಮಾಣ, ಹೆದ್ದಾರಿಗಳ ವಿಸ್ತರಣೆ, ನಗರ ವಸತಿ ಸೌಕರ್ಯಗಳ ವಿಕಸನ, ಇವೇ ಕೆಲವು ಯಶೋಗಾಥೆಗಳನ್ನು ಇತ್ತೀಚಿನ ಕೆಲವು ವರ್ಷಗಳಲ್ಲಿ ನಾವು ಕಂಡಿದ್ದೇವೆ. ಈ ಯಶೋಗಾಥೆಗಳು ಶಾಶ್ವತ ನೆಲೆಗಾಣಬೇಕಾದರೆ, ಅವುಗಳನ್ನು ಪ್ರತಿಬಂಧಿಸುವ ಬದಲು, ಒಂದು ಹೊಸ ನೀತಿ ಹಾಗೂ ಹೊಸ ಶಾಸನದ ಅಗತ್ಯವಿದೆ.

**ಸಮ್ಮಿಶ್ರ ಸರ್ಕಾರಗಳು**

ದೊಡ್ಡ ನಾಯಕರ ಹಾಗೂ ವಿಶಾಲ ಬಹುಮತದ ಯುಗ ಈಗ ಮುಕ್ತಾಯಗೊಂಡಿದೆ. ಸ್ವಶಕ್ತಿಯ ಆಧಾರದ ಮೇಲೆ ದೊಡ್ಡ ಬಹುಮತ ಗಳಿಸುವ ಸಾಧ್ಯತೆ ಯಾವ ಪಕ್ಷಗಳಿಗೂ ಇಲ್ಲ. ಭಾರತದ ರಾಜಕೀಯ ಸ್ವರೂಪ ಬದಲಾಗಿದೆ. ಸ್ವಾತಂತ್ರ್ಯ ದೊರೆತ ನಂತರದ ಕೆಲವು ವರ್ಷಗಳಲ್ಲಿ ಭಾರತದ ಏಕತೆ ಮತ್ತು ಸಮಗ್ರತೆಯ ಕುರಿತು ಕಾಳಜಿ ವಹಿಸುವುದೇ ರಾಜಕೀಯ ಚಿಂತನೆಯಾಗಿದ್ದವು. ಸಾರ್ವಭೌಮತೆಯೇ ಪರಮ ಆಸಕ್ತಿಯ ವಿಷಯವಾಗಿತ್ತು. ರಾಷ್ಟ್ರೀಯ ಸಾರ್ವಭೌಮತೆಗೆ ಇದ್ದ ಬೆದರಿಕೆಗಳು ಕ್ರಮೇಣ ಇಳಿಮುಖ ಕಂಡಾಗ, ಮುಂದಿನ ದಿನಗಳಲ್ಲಿ, ಆರ್ಥಿಕ ಅಭಿವೃದ್ಧಿ, ಬಡತನ ನಿರ್ಮೂಲನೆ ಹಾಗೂ ಪ್ರಾದೇಶಿಕ ಆಕಾಂಕ್ಷೆಗಳ ಈಡೇರಿಕೆಯತ್ತ ನಮ್ಮ ಚಿಂತನೆ ಕೇಂದ್ರೀಕರಿಸಿತು. ಒಕ್ಕೂಟ ವ್ಯವಸ್ಥೆಗೆ ಇಂದು ಹೆಚ್ಚಿನ ಮಾನ್ಯತೆ ದೊರೆತಿದೆ. ಒಕ್ಕೂಟ ವ್ಯವಸ್ಥೆಯಡಿ, ವಿವಿಧ ರಾಜ್ಯಗಳ ಪ್ರಾದೇಶಿಕ ಪಕ್ಷಗಳೊಂದಿಗೆ ಅಧಿಕಾರ ಹಂಚಿಕೊಳ್ಳುವ ಆವಶ್ಯಕತೆಯಿದೆ. ಸಮ್ಮಿಶ್ರ ಸಮೂಹದ ಸಂಚಾಲಕನ ಪಾತ್ರವನ್ನು ರಾಷ್ಟ್ರೀಯ ಪಕ್ಷ ನಿಭಾಯಿಸಲು ಸಾಧ್ಯ. ಲೋಕ ಸಭೆಯಲ್ಲಿ ಹೆಚ್ಚಿನ ಸ್ಥಾನ ಗೆದ್ದಿರುವ ಪಕ್ಷ ಸಮ್ಮಿಶ್ರ ಸಮೂಹದ ಸಂಚಾಲಕನಂತೆ ವರ್ತಿಸಬಹುದು. ಪ್ರಾದೇಶಿಕ ಪಕ್ಷಗಳು ಅಧಿಕಾರ ಹೊಂದಾಣಿಕೆಯ ಸಾಮರ್ಥ್ಯ ಹೊಂದಿದ್ದು, ನವದೆಹಲಿಯ ಚುಕ್ಕಾಣಿ ಯಾರಿಗೆ ಎಂಬ ನಿರ್ಧಾರ ತೆಗೆದುಕೊಳ್ಳಬಹುದು. ಸಮ್ಮಿಶ್ರ ಸರ್ಕಾರ ಯಶಸ್ವಿಯಾಗಿ ಕಾರ್ಯವಹಿಸಲು ಬೇಕಾಗುವ ಎರಡು ಪ್ರಮುಖ ಸೂತ್ರಗಳೆಂದರೆ, ರಾಷ್ಟ್ರೀಯ ಪಕ್ಷಗಳು ಪ್ರಾದೇಶಿಕ ಪಕ್ಷಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡುವ ವಿಶಾಲ ಹೃದಯವಂತಿಕೆ ಪ್ರದರ್ಶಿಸಬೇಕಿದ್ದರೆ, ಪ್ರಾದೇಶಿಕ ಪಕ್ಷಗಳು ರಾಷ್ಟ್ರೀಯ ಮಟ್ಟದ ದೃಷ್ಟಿಕೋನ ಬೆಳೆಸಿಕೊಳ್ಳುವ ಅಗತ್ಯವಿದೆ. ಇವೆರಡರಿಂದಲೇ ಉತ್ತಮ ಆಡಳಿತ ನೀಡಲು ಸಾಧ್ಯ.

**ಭ್ರಷ್ಟಾಚಾರ**

ಭ್ರಷ್ಟಾಚಾರವು ನಮ್ಮ ಆಳ್ವಿಕೆಯ ಜೀವಾಳವನ್ನು ನುಂಗುತ್ತಿದೆ. ಭ್ರಷ್ಟಾಚಾರವು ಹೂಡಿಕೆದಾರರನ್ನು ತಡೆಯುತ್ತಿದೆ. ಇದು ವೆಚ್ಚವನ್ನೂ ಹೆಚ್ಚಿಸುತ್ತದೆ. ದೂರಸಂಪರ್ಕ ಹಾಗೂ ರಾಷ್ಟ್ರೀಯ ಹೆದ್ದಾರಿ ಕ್ಷೇತ್ರದ ಯಶೋಗಾಥೆ, ಭ್ರಷ್ಟಾಚಾರದಿಂದಾಗಿ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ. ಕಲ್ಲಿದ್ದಲು ನಿಕ್ಷೇಪ ಹಂಚಿಕೆ ವಿಚಾರದಲ್ಲಿ ಸಂಭವಿಸಿದ ಭ್ರಷ್ಟಾಚಾರದಿಂದ ವಿದ್ಯುತ್ ಕ್ಷೇತ್ರ ಅತೀವ ಬಿಕ್ಕಟ್ಟು ಎದುರಿಸುತ್ತಿದೆ. 1991ರಲ್ಲಿ ಆರಂಭಿಸಲಾದ ಲೈಸೆನ್ಸ್ ಪದ್ಧತಿಯ ತೆರವಿನಿಂದ ಭ್ರಷ್ಟಾಚಾರ ದೂರವಾಗಲಿದೆ ಎಂಬ ಆರಂಭಿಕ ನಂಬಿಕೆ ಈಗ ಮಿಥ್ಯವೆನಿಸಿದೆ. ಭೂ ಸಂಬಂಧಿತ ವ್ಯವಹಾರ, ರಿಯಲ್ ಎಸ್ಟೇಟ್ ವ್ಯಾಪಾರ, ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆ, ಗಣಿಗಾರಿಕೆ, ಮದ್ಯಸಾರ, ಖಾಸಗಿ ಕ್ಷೇತ್ರದ ಶಿಕ್ಷಣ–ಇವೆಲ್ಲಾ ಕ್ಷೇತ್ರಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ.

ನಮಗೆ ಸ್ವಾತಂತ್ರ್ಯ ಬಂದು 65 ವರ್ಷಗಳು ಗತಿಸಿದರು, ರಾಜಕೀಯ ಪಕ್ಷಗಳ ಧನ ಸಂಗ್ರಹಣೆ ಮಾರ್ಗ ಬಹಳಷ್ಟು ಅದೃಶ್ಯವಾಗಿರುವುದು ಶೋಚನೀಯ. ಲೋಕಪಾಲರ ನೇಮಕ ಕುರಿತು ಇತ್ತೀಚೆಗೆ ಉದ್ಭವಿಸಿರುವ ಚರ್ಚೆ ಹಾಗೂ ಭ್ರಷ್ಟಾಚಾರ ವಿರೋಧಿ ಪ್ರಾಧಿಕಾರದ ಆವಶ್ಯಕತೆಯಿಂದ, ಭ್ರಷ್ಟಾಚಾರ ವಿರೋಧಿ ಕಾನೂನು ರೂಪುಗೊಳ್ಳಬೇಕೆಂಬ ಅನಿವಾರ್ಯತೆ ಉದ್ಭವಿಸಿದೆ. ಭ್ರಷ್ಟಾಚಾರ ನಿಗ್ರಹ ಅಧಿಕಾರಿಯ ನೇಮಕ ಮಾಡುವ ಕುರಿತು ಜನರಿಂದ ಅಗಾಧ ಪ್ರಮಾಣದ ಒತ್ತಡವಿದ್ದರೂ, ಮುಕ್ತ ಮತ್ತು ಪ್ರಭಾವಿ ಲೋಕಪಾಲರ ನೇಮಕ ಕುರಿತು ಭಾರತ ಸರ್ಕಾರ ಅಷ್ಟೇ ಮುಕ್ತವಾಗಿದೆ. ಸರ್ಕಾರಿ ನೌಕರರ ವಿರುದ್ಧ ಅಪರಾಧಗಳ ತನಿಖೆ ನಡೆಸುವ ವಿಚಾರಣೆ ಯಂತ್ರ ಮುಕ್ತ ಸ್ವರೂಪದ್ದಾಗಿರಬೇಕು ಎಂಬುದು ಇಲ್ಲಿರುವ ಪ್ರಮುಖ ವಿಚಾರ. ತನಿಖಾ ಸಂಸ್ಥೆಯಾಗಿ ಸಿಬಿಐ ಸ್ವಾಭಾವಿಕ ಆಯ್ಕೆಯಾಗಿದೆ. ಆದರೂ, ಸಿಬಿಐ ನಿಯಂತ್ರಣವನ್ನು ಕೇಂದ್ರ ಸರ್ಕಾರದ ಕೈಗೆ ನೀಡುವುದು ಸೂಕ್ತವಲ್ಲ. ಸಿಬಿಐ ಅನುಸರಿಸಬೇಕಾದ ನೀತಿ ವಿಧಾನಗಳನ್ನು ಕೇಂದ್ರ ಸರ್ಕಾರ ನಿರ್ಧರಿಸಲು ಸಾಧ್ಯವೇ? ಕೇಂದ್ರ ಸಂಪುಟವು ಆಯ್ಕೆ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ತಯಾರು ಮಾಡಿದ ಅಂತಿಮ ಕರಡು ಪ್ರತಿಯಲ್ಲಿ ಗಣನೀಯ ಬದಲಾವಣೆಗಳ ಅಗತ್ಯವಿದೆ ಎಂಬ ಸಲಹೆಯನ್ನು ನಾನು ಈಗಾಗಲೆ ನೀಡಿದ್ದೇನೆ. ಸಿಬಿಐ ನಿರ್ದೇಶಕನಾದ ವ್ಯಕ್ತಿ ನಿವೃತ್ತಿಯ ನಂತರ ಮರು ನೇಮಕವಾಗುವ ಅರ್ಹತೆ ಹೊಂದಿರಬಾರದು. ಹೀಗಾದರೆ ಮಾತ್ರ ಸಿಬಿಐ ನಿರ್ಭೀತಿ ಮತ್ತು ಪಕ್ಷಪಾತವಿಲ್ಲದೆ ಕಾರ್ಯವಹಿಸಲು ಸಾಧ್ಯ. ತನಿಖಾ ಪ್ರಕ್ರಿಯೆ ಮಧ್ಯದಲ್ಲಿಯೇ, ತನಿಖಾ ಅಧಿಕಾರಿಯನ್ನು ಲೋಕಪಾಲರ ಸ್ವೀಕೃತಿಯಿಲ್ಲದೆ ಬದಲಾಯಿಸುವಂತಿಲ್ಲ. ತನಿಖೆ ಆರಂಭಿಸುವ ಮುನ್ನವೇ ಆರೋಪ ಎದುರಿಸುವ ಅಧಿಕಾರಿಗೆ ಸಮರ್ಥನೆ ನೀಡುವ ಅವಕಾಶವನ್ನು ಲೋಕಪಾಲರು ನೀಡಬಾರದು. ಇದರಿಂದ ತನಿಖಾ ಪ್ರಕ್ರಿಯೆ ಆರಂಭವಾಗುವ ಮುನ್ನವೆ, ಸಾಕ್ಷ್ಯಾಧಾರಗಳನ್ನು ಅಳಿಸುವ ಅವಕಾಶವನ್ನು ಆರೋಪಿಗೆ ನೀಡಿದಂತಾಗುತ್ತದೆ. ಲೋಕಪಾಲರ ನೇಮಕಾತಿಯಲ್ಲಿ ಧರ್ಮ ಆಧಾರಿತ ಮೀಸಲಾತಿ ನೀಡುವುದು ಸಂವೈಧಾನಿಕ ಕ್ರಮವಾಗದು.

**ಪ್ರಾಮಾಣಿಕ ಮತ್ತು ನ್ಯಾಯಸಮ್ಮತ ಸಮಾಜದ ನಿರ್ಮಾಣ**

ಜಾತಿ ಮತ್ತು ಧರ್ಮದ ಆಧಾರದ ಮೇಲೆ ಸಾಮಾಜಿಕ ಪ್ರಕ್ಷುಬ್ಧತೆ ಸೃಷ್ಟಿಸುವ ಯತ್ನಗಳ ದಮನವಾಗಬೇಕು. ಸಮುದಾಯಗಳ ನಡುವೆ ನಿರಂತರ ಸಂವಾದ ಏರ್ಪಡುವ ಅಗತ್ಯವಿದೆ. ಸಮುದಾಯಗಳ ನಡುವೆಯ ಸಂಬಂಧಗಳು ಬಿಗಡಾಯಿಸುವ ಅನಿಸಿಕೆಗಳನ್ನು ಅತ್ಯಂತ ಹತೋಟಿಯೊಂದಿಗೆ ನೀಡುವ ಪರಿಪಾಠ ಬೆಳೆಯಬೇಕು. ಪ್ರಬುದ್ಧ ಸಮಾಜವನ್ನು ಕರುಣೆ ಹಾಗೂ ಪ್ರಾಮಾಣಿಕತೆಯ ಅಳತೆಗೋಲಿನಿಂದ ಅಳೆಯಬಹುದು. ರಾಷ್ಟ್ರ ರಾಜಧಾನಿಯಲ್ಲಿ ಇತ್ತೀಚೆಗೆ ಸಂಭವಿಸಿದ

ಸಾಮೂಹಿಕ ಅತ್ಯಾಚಾರ ಪ್ರಕರಣವು ಮುಕ್ತ ಸಮಾಜದ ಅಂತಃಸಾಕ್ಷಿಯನ್ನು ಕದಡಿದೆ. ಮಹಿಳೆಯರು ಭೋಗದ ವಸ್ತುಗಳು ಎಂಬ ಮೌಢ್ಯತೆ ದೂರವಾಗಿಲ್ಲ. ಹೆಣ್ಣುಮಗಳನ್ನು ನಡೆಸಿಕೊಂಡ ರೀತಿ, ಪೈಶಾಚಿಕ ಕೃತ್ಯವನ್ನು ನೆನಪಿಗೆ ತರುತ್ತದೆ. ಭಾರತವು ಸಭ್ಯತೆಯ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡಿದೆ.

ನಮ್ಮ ಪರಿಶಿಷ್ಠ ಜಾತಿಗಳು ಮತ್ತು ಪಂಗಡಗಳು ಹೀನಾಯ ಜೀವನ ನಡೆಸುತ್ತಿವೆ. ಸಕಾರಾತ್ಮಕ ಕಾರ್ಯ ಚಟುವಟಿಕೆಗಳ ಮುಖೇನ ಸಮಾಜದ ಅಸಮಾನತೆಯನ್ನು ದೂರಮಾಡುವ ಪ್ರಯತ್ನಗಳು ಹೆಚ್ಚಬೇಕು. ಮೀಸಲಾತಿಯು ಬಡತನ ನಿರ್ಮೂಲನೆಯ ಕ್ರಮವಾಗಿದೆ. ಐತಿಹಾಸಿಕ ಶೋಷಣೆಯಿಂದ ಮುಕ್ತಗೊಳಿಸುವ ಮಾರ್ಗ ಇದಾಗಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಹಿಸದೆಯಿರುವ ಹೊಸ ಪರಿಪಾಠ ತಲೆಯೆತ್ತಿದೆ. ಒಂದು ಭಾಷಣ ಅಥವಾ ಯಾವುದೇ ಒಂದು ಚಲನಚಿತ್ರದ ವಿರುದ್ಧ ನಡೆಯುವ ಪ್ರತಿಭಟನೆಯು ಸಮಾಜವನ್ನು ಒತ್ತೆಯಿಡುವ ಮಟ್ಟಕ್ಕೆ ಇಳಿಯಬಾರದು. ಅದೇರೀತಿ, ಸಾರ್ವಜನಿಕ ಜೀವನದಲ್ಲಿ ವ್ಯವಹರಿಸುವವರು ತಾವು ಸಾರ್ವಜನಿಕವಾಗಿ ಬಳಸುವ ಪದಗಳನ್ನು ತೂಗುಹಾಕುವ ಹಾಗೂ ಪ್ರಚೋದನೆ ಮುಕ್ತ ಗೊಳಿಸುವ ಅಗತ್ಯವಿದೆ. ಭ್ರಷ್ಟಾಚಾರ ಹೆಚ್ಚಲು ಯಾವುದೇ ಒಂದು ಜಾತಿ ಅಥವಾ ಪಂಗಡ ಕಾರಣವೆಂದು ಅಥವಾ ಭ್ರಷ್ಟಾಚಾರದಲ್ಲಿ ಎಲ್ಲಾ ಜಾತಿಯವರೂ ಸಮಭಾಗಿಗಳು ಎಂಬ ಅನಿಸಿಕೆಗಳನ್ನು ಒಪ್ಪಲು ಸಾಧ್ಯವಿಲ್ಲ. ಮುಕ್ತ ನುಡಿಯನ್ನು ಪೋಷಿಸುವ ಜೊತೆಗೆ ಮುಕ್ತ ನುಡಿಯ ಹಕ್ಕನ್ನು ಚಲಾಯಿಸುವಾಗ ಸಂವೈಧಾನಿಕವಾಗಿ ಸೂಚಿಸಲಾದ ಹತೋಟಿಯ ಗುಣವನ್ನು ಬೆಳೆಸಿಕೊಳ್ಳುವುದು ಮುಖ್ಯ.

**ಭಯೋತ್ಪಾದನೆ ಮತ್ತು ಬಂಡಾಯ**

ಗಡಿಯಾಚೆಯ ಮತ್ತು ಆಂತರಿಕವಾದ ವಿದ್ರೋಹಗಳನ್ನು ಭಾರತ ಎದುರಿಸುತ್ತಿದೆ.

ಭಾರತದ ವಿಭಜನೆ ಆದಂದಿನಿಂದ ಕಾಶ್ಮೀರದಲ್ಲಿ ಹಸ್ತಕ್ಷೇಪ ಮಾಡುವುದನ್ನು ಪಾಕಿಸ್ತಾನ ನಿಲ್ಲಿಸಿಲ್ಲ. ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ ಎಂಬುದನ್ನು ಜೀರ್ಣಿಸಿಕೊಳ್ಳಲು ಪಾಕಿಸ್ತಾನಕ್ಕೆ ಸಾಧ್ಯವಾಗಿಲ್ಲ. ಸಾಂಪ್ರದಾಯಿಕ ಯುದ್ಧದ ಮೂಲಕ ಮತ್ತು ನಂತರ ಎರಡು ದಶಕಗಳ ವರೆಗೂ ಗಡಿ ಆಚೆಯಿಂದಲೇ ಬಂಡಾಯ ಎಬ್ಬಿಸುವ ಪ್ರಯತ್ನವನ್ನು ಪಾಕಿಸ್ತಾನ ಮಾಡಿದೆ. ಇತ್ತೀಚಿನ ಕೆಲವು ವರ್ಷಗಳಿಂದ ಭಾರತದಲ್ಲಿಯೇ ವಿಧ್ವಂಸಕ ಗುಂಪುಗಳನ್ನು ಪ್ರಚೋದಿಸುತ್ತಿರುವ ಪಾಕಿಸ್ತಾನ, ನಮ್ಮ ದೇಶದದೊಳಗೆ ಭಯೋತ್ಪಾದಕ ಕೃತ್ಯಗಳನ್ನು ಪ್ರೋತ್ಸಾಹಿಸುತ್ತಿದೆ.

ದೇಶದ ಗಡಿರೇಖೆ ಬದಲಾಯಿಸುವ ಯುಗ ಅಂತ್ಯವಾಗಿದೆ ಎಂಬ ಸತ್ಯವನ್ನು ಪಾಕಿಸ್ತಾನ ಅರ್ಥಮಾಡಿಕೊಳ್ಳಬೇಕು. ಆಂತರಿಕ ಬಿಕ್ಕಟ್ಟು ಎದುರಿಸುತ್ತಿರುವ ಪಾಕಿಸ್ತಾನ, ತನ್ನ ಸಮಸ್ಯೆಗಳನ್ನು ಬಗೆಹರಿಸುವತ್ತ ಗಮನ ಹರಿಸಬೇಕೇ ಹೊರತು ಭಾರತವನ್ನು ಕಾಮಾಲೆ ಕಣ್ಣಿನಿಂದ ನೋಡುವುದನ್ನು ನಿಲ್ಲಿಸಬೇಕು. ಭಾರತೀಯ ಸಂಸತ್‌ನ ಮೇಲೆ ಧಾಳಿ, 26/11ರ ಮುಂಬೈ ಧಾಳಿ, ಇತ್ತೀಚೆಗೆ ಗಡಿಭಾಗದಲ್ಲಿ ಭಾರತೀಯ ಸೈನಿಕನ ಶಿರಚ್ಛೇದನ ಮಾಡಿದ ಪ್ರಕರಣಗಳು ಭಾರತವನ್ನು ಪ್ರಚೋದಿಸುವ ಯತ್ನಗಳಾಗಿದ್ದು, ಪಾಕಿಸ್ತಾನದೊಳಗೆ ಆಶ್ರಯ ಪಡೆದ ವಿಧ್ವಂಸಕ ಶಕ್ತಿಗಳ ಮೂಲಕ ಈ ಕೃತ್ಯಗಳನ್ನು ಮಾಡಿಸಲಾಗುತ್ತಿದೆ. ಇಂದು, ಪಾಕಿಸ್ತಾನದಲ್ಲಿರುವ ಸೇನೆ, ಐಎಸ್‌ಐ, ನಾಗರಿಕ ಸರ್ಕಾರ ಹಾಗೂ ಭಯೋತ್ಪಾದನಾ ಸಮೂಹಗಳು ತಮ್ಮದೇ ಆದ ಕಾರ್ಯಸೂಚಿಯೊಂದಿಗೆ ವರ್ತಿಸುತ್ತಿವೆ. ತನ್ನ ರಾಜನೀತಿಯ ಭಾಗವಾಗಿ

ಭಯೋತ್ಪಾದನೆಯನ್ನು ಅಸ್ತ್ರವಾಗಿ ಬಳಸುವವರೆಗು, ಪಾಕಿಸ್ತಾನದೊಂದಿಗೆ ಅಮೆರಿಕವಾಗಲಿ ಅಥವಾ ಭಾರತವಾಗಲಿ ಸಂಧಾನ ನಡೆಸಿ ಉಪಯೋಗವಿಲ್ಲ. ಪಾಕಿಸ್ತಾನ ಮತ್ತಷ್ಟು ಎಚ್ಚೆತ್ತುಕೊಂಡು, ತೀವ್ರಗಾಮಿಗಳ ಉಪಟಳ ತೊಲಗಿಸಿ, ಪಾಕಿಸ್ತಾನದಲ್ಲಿ ನಾಗರಿಕ ಸರ್ಕಾರ ಬಲಗೊಂಡು, ಭಯೋತ್ಪಾದಕರಿಗೆ ನೀಡಲಾಗುವ ಎಲ್ಲಾ ಬಗೆಯ ಕುಮಕ್ಕು ನಿಂತರೆ ಮಾತ್ರ ಆ ದೇಶದೊಂದಿಗೆ ಗಂಭೀರ ಹಾಗೂ ಯಶಸ್ವಿ ಸಂಬಂಧ ಬೆಳೆಸಿಕೊಳ್ಳಲು ಸಾಧ್ಯ. ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ ಎಂಬುದನ್ನು ಪಾಕಿಸ್ತಾನ ಅರ್ಥಮಾಡಿಕೊಳ್ಳುವುದು ಒಳ್ಳೆಯದು. ಕಾಶ್ಮೀರದ ಸಂವೈಧಾನಿಕ ಸ್ವರೂಪ ನಿರ್ಧರಿಸುವಾಗ ಹಾಗೂ ಭಾರತದ ಉಳಿದ ಭಾಗದೊಂದಿಗೆ ಅದರ ಸಂಬಂಧ ಕಲ್ಪಿಸುವಾಗ ನಮ್ಮಿಂದ ಐತಿಹಾಸಿಕ ಲೋಪವುಂಟಾಯಿತು. ಅದೇನೆಯಿರಲಿ,  ದಂಗೆ ಹಾಗೂ ಪ್ರತ್ಯೇಕತಾವಾದದ ವಿರುದ್ಧ ನಾವು ಸಾರಿರುವ ಸಮರದಲ್ಲಿ ಕಾಶ್ಮೀರಿ ಜನರನ್ನು ನಮ್ಮೊಂದಿಗೆ ಸೇರಿಸಿಕೊಳ್ಳಬೇಕಾದ್ದು ಆವಶ್ಯಕವಾಗಿದೆ. ಕಾಶ್ಮೀರಿ ಯುವಕರಲ್ಲಿ ಬಲವಾದ ಆಕಾಂಕ್ಷೆಗಳನ್ನುವುಳ್ಳ ವರ್ಗ ಬೆಳೆಯುತ್ತಿದೆ. ನಮ್ಮ ನೀತಿಗಳು ಜನಪರವಾಗಿರಬೇಕು ಮತ್ತು ಪ್ರತ್ಯೇಕತಾವಾದಿಗಳ ವಿರುದ್ಧವಾಗಿರಬೇಕು.

ಮಾವೋವಾದಿಗಳ ಉಪದ್ರವ, ಭಾರತ ಎದುರಿಸುತ್ತಿರುವ ಬಹು ದೊಡ್ಡ ಸವಾಲುಗಳಲ್ಲಿ ಒಂದಾಗಿದೆ. ದೇಶದ ಮಧ್ಯಭಾಗದಲ್ಲಿರುವ ಸರಿಸುಮಾರು 200 ಜಿಲ್ಲೆಗಳು ಇವರ ಉಪಟಳಕ್ಕೆ ಒಳಗಾಗಿವೆ. ಬುಡಕಟ್ಟು ಜನಾಂಗಗಳು ವಾಸಿಸುವ ಪ್ರದೇಶಗಳಲ್ಲಿ ಇವರಿಗೆ ಹೆಚ್ಚಿನ ಬೆಂಬಲವಿದೆ. ಭಾರತದ ಆರ್ಥಿಕ ಸಂಪನ್ಮೂಲಗಳ ಮೇಲಿನ ಮೊದಲ ಹಕ್ಕು ಬುಡಕಟ್ಟು ಜನಾಂಗಕ್ಕೆ ಸಲ್ಲಬೇಕಿದೆ. ಈ ಪ್ರದೇಶಗಳು ಅತಿ ಹಿಂದುಳಿದ ಮತ್ತು ಅಭಿವೃದ್ಧಿ ಕಾಣದ ಪ್ರದೇಶಗಳು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಮಾವೋವಾದಿಗಳ ಪ್ರಭಾವವಿರುವ ಪ್ರದೇಶಗಳನ್ನು ಪ್ರವೇಶಿಸಬೇಕಾದರೆ ಲ್ಯಾಂಡ್‌ಮೈನ್ ಹಾಗೂ ಅಸ್ತ್ರಗಳ ಪ್ರತಿರೋಧ ಎದುರಾಗುತ್ತದೆ. ಮಾವೋವಾದಿಗಳು ಸಾಮಾಜ ಸುಧಾರಕರಲ್ಲ. ಮಾವೋವಾದವು ಬಡತನ ನಿರ್ಮೂಲನ ಕಾರ್ಯಕ್ರಮವಲ್ಲ.

ಭಾರತದ ಸಂಸದೀಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಯತ್ನವೇ ಮಾವೋವಾದ. ಮಾವೋವಾದಿಗಳು ಬಳಸುವ ಬಹುಪಾಲು ಅಸ್ತ್ರಗಳು ಭಾರತೀಯ ಭದ್ರತಾ ಪಡೆಗಳಿಗೆ ಸೇರಿದ್ದವು. ಅಭಿವೃದ್ಧಿ ಮತ್ತು ಭದ್ರತಾ ಕ್ರಮಗಳ ಇಬ್ಬಗೆ ಕ್ರಮಗಳ ಮೂಲಕ ಮಾವೋವಾದಿಗಳ ಉಪಟಳವಿರುವ ಪ್ರದೇಶಗಳಿಂದ ಮಾವೋವಾದಿಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಹಮ್ಮಿಕೊಳ್ಳಬೇಕಿದೆ.

**ನಮ್ಮ ಜನಸಂಖ್ಯೆ ಜನಸಂಪನ್ಮೂಲವಾಗಬೇಕು**

ಭಾರತವು ಯುವ ಜನಸಂಖ್ಯೆ ಹೆಚ್ಚಿರುವ ರಾಷ್ಟ್ರವಾಗಿದೆ. ಕೇವಲ ಪ್ರಜಾಪ್ರಭುತ್ವದ ಸೌಲಭ್ಯಗಳು ಇದ್ದರೆ ಸಾಲದು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಜನರ ಕೊರತೆಯನ್ನು ಎದುರಿಸುತ್ತಿವೆ. ಅವರ ಜನಸಂಖ್ಯೆ ಕುಗ್ಗುತ್ತಿರುವುದರಿಂದ, ಅವರ ಅರ್ಥವ್ಯವಸ್ಥೆಯನ್ನು ಮುಂದೆ ಸಾಗಿಸುವುದು ಕಷ್ಟವಾಗಿದೆ. ಮಧ್ಯಮವರ್ಗದ ಬೆಳವಣಿಗೆ ಹಾಗೂ ಆಕಾಂಕ್ಷೆಗಳನ್ನು ಹೊಂದಿರುವ ವರ್ಗ ಹೆಚ್ಚುತ್ತಿರುವ ಜೊತೆಗೆ ಶಿಕ್ಷಣ ವ್ಯವಸ್ಥೆಯ ಹಾಗೂ ಮಾನವ ಸಂಪನ್ಮೂಲದ ಬೆಳವಣಿಗೆಯನ್ನು ಕಾಣುತ್ತಿರುವ ಭಾರತ,  ಉತ್ತಮ ತರಬೇತಿಯುಳ್ಳ ಮಾನವ ಸಂಪನ್ಮೂಲ ಅಭಿವೃದ್ಧಿ ಪಡಿಸುತ್ತಿದ್ದೇವೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಅವರ ಆವಶ್ಯಕತೆಯಿದೆ. ನಮ್ಮ ಬೆಳೆಯುತ್ತಿರುವ ಜನಸಂಖ್ಯೆಯನ್ನು ಆರ್ಥಿಕ ಮೌಲ್ಯಗಳನ್ನು ಉಳ್ಳ ಸಂಪನ್ಮೂಲವಾಗಿ ಪರಿವರ್ತಿಸಿ ಅದರ ಲಾಭ ಗಳಿಸುವ ಅಗತ್ಯವಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೂ ಮತ್ತು ಭಾರತಕ್ಕೂ ಆಡಳಿತಾತ್ಮಕ ವ್ಯತ್ಯಯಯಿರುವ ಕಾರಣ ಇದರ ಲಾಭವನ್ನು ನಮ್ಮ ಜನಸಂಪನ್ಮೂಲ ಪಡೆಯಬಹುದಾಗಿದೆ.

**ಭಾರತ ನಯವಾದ ಶಕ್ತಿಯಾಗಿ ರೂಪುಗೊಳ್ಳಬೇಕಿದೆ**

ಭಾರತದ ನಾಗರಿಕತೆ, ಅದರ ಇತಿಹಾಸ, ಅದರ ಸಂಸ್ಕೃತಿ, ಅದರ ಜನಸಂಖ್ಯೆ, ಅದರ ಅನಿವಾಸಿ ದೇಶವಾಸಿಗಳು ಹಾಗೂ ಇದರೊಂದಿಗೆ ಭಾರತದ ವಿಶೇಷ ರಾಷ್ಟ್ರೀಯ ಕುರುಹುಗಳಾಗಿರುವ ಕ್ರೀಡೆ, ಸಂಗೀತ, ಸಿನೆಮಾ ಹಾಗೂ ಸಾಹಿತ್ಯವು ಭಾರತವನ್ನು ನಯವಾದ ಸಾಮರ್ಥ್ಯಗಳನ್ನು ಹೊಂದಿರುವ ರಾಷ್ಟ್ರವನ್ನಾಗಿ ಮಾಡಬಲ್ಲವು.

ಸಮಯದ ಅಭಾವದಿಂದ ಕೇವಲ ಕೆಲವು ಪ್ರಮುಖ ವಿಚಾರಗಳನ್ನು ತಿಳಿಸಿದ್ದೇನೆ. ಈ ಒಂದು ಕಾರ್ಯಯೋಜನೆಯೊಂದಿಗೆ ಸಂಪನ್ಮೂಲದ ಸೂಕ್ತ ಬಳಕೆಯೊಂದಿಗೆ ಕಾರ್ಯವಹಿಸಿದರೆ, ರಾಷ್ಟ್ರದ ಜನರಲ್ಲಿರುವ ನಂಬಿಕೆಯು ಸಿನಿಕತನವನ್ನು ಮೀರಿ ಬೆಳೆಯುವ ಸಮಯ ಸನ್ನಿಹಿತವಾಗಲಿದೆ ಎಂಬುದರಲ್ಲಿ ಎಳ್ಳಷ್ಟು ಸಂದೇಹವಿಲ್ಲ.